


ಅಂತ ಸ್ವಂತ ಸಮಯ ಅಥವಾ ಸ್ಪೇಸ್ ಕೊಡುವುದಿಲ್ಲ. ನಮ್ಮಸ್ವಂತ ಅನಿಸಿಕೆಯ ಬಗ್ಗೆ ಅಲ್ಲಿನ ಜನರಿಗೆ ಗೌರವ ಅಥವಾ ಕಾಳಜಿ ಇಲ್ಲ, ಎಂದೆಲ್ಲಾ ಕೇಳಿದ್ದೆ. ಅಲ್ಲಿ ಹೇಗೋ ಏನೋ. ಮೂರು ವಾರ ಹೇಗೆ ಕಳೆಯಬೇಕೋ ಎಂಬ ಗೊಂದಲ್ಲಿದ್ದಾಗಲೇ ನಮ್ಮ ಫ್ಲೈಟ್ ಲ್ಯಾಂಡ್ ಆಗಿತ್ತು. ಭಾರತದ ನೆಲವನ್ನು ಮುಟ್ಟಿತ್ತು. ಪಕ್ಕದಲ್ಲಿ ಮಮ್ಮಿ ಒಂದು ಸಣ್ಣ ಉದ್ಗಾರ ಮಾಡಿದರು. 'ಓಹ್ ಇಂಡಿಯಾ, ನಮ್ಮ ಊರು. ಸಂಯುಕ್ತ ಬಂದೇಬಿಟ್ಟೆವು ನಮ್ಮ ಊರಿಗೆ'. ಆಕೆ ನನ್ನನ್ನು ನೋಡಿದ ರೀತಿಯಲ್ಲಿ ಎಷ್ಟೊಂದು ಉತ್ಸಾಹವಿತ್ತು. ಆದರೆ ನನಗೆ ಅವಳಿಗೆ ಸರಿಸಮಾನವಾಗಿ ಸ್ಪಂದಿಸಲಾಗಲಿಲ್ಲ.

ವಿಮಾನ ನಿಲ್ದಾಣದಲ್ಲಿ ನಮ್ಮನ್ನು ಬರ ಮಾಡಿಕೊಳ್ಳಲು ಮಮ್ಮಿಯ ಕಡೆಯವರೆಲ್ಲರೂ ಬಂದಿದ್ದರು. ಎಲ್ಲರೂ ಬಂದು ಮಮ್ಮಿಯನ್ನು ತಬ್ಬಿ ಕೊಂಡರು. ನನ್ನನ್ನು ಯಾರೋ ಒಬ್ಬ ದಢೂತಿ ಹೆಂಗಸು ಬಂದು, 'ಏ ನಮ್ಮ ಸಂಯುಕ್ತಾನಾ, ಎಷ್ಟು ದೊಡ್ಡವಳಾಗಿಬಿಟ್ಟಿದ್ದಾಳೆ' ಎಂದು ಬಿಗಿಯಾಗಿ ತಬ್ಬಿ ಬಿಟ್ಟರು. ನನಗೆ ಒಂದು ಕ್ಷಣ ಉಸಿರು ಕಟ್ಟಿದಂತಾಯಿತು. ಅವರ ಆ ನೈಲಾನ್ ಸೀರೆ, ಅವರ ಮೈಯ್ಯಿನ ಪೌಡರ್ ವಾಸನೆ, ಅವರುಗಳ ಗಲಾಟೆ, ಎಲ್ಲರೂ ಒಮ್ಮೆಲೇ ಮಾತನಾಡುವ ರೀತಿ, ಹತ್ತಿರದಲ್ಲೇ ಇದ್ದರೂ ಜೋರಾಗಿ ಕೂಗಿ ಮಾತನಾಡುವ ಪರಿ ಎಲ್ಲವೂ ಅಸಹನೀಯ ಎನ್ನಿಸಿತು. ಪ್ರಾರಂಭದಲ್ಲಿಯೇ ಇಲ್ಲಿ ಏನೂ ಸರಿಯಿಲ್ಲ ಎನ್ನಿಸತೊಡಗಿತು. ಹಿಂತಿರುಗಿ ಇನ್ನೊಂದು ಫ್ಲೈಟ್ ಹಿಡಿದು ಅಮೆರಿಕಕ್ಕೆ ಹೋಗಿಬಿಡಲೇ ಎನ್ನಿಸಿತು. ಮಮ್ಮಿ ನನ್ನ ಕೈಹಿಡಿದು, `ಸಂಯುಕ್ತಾ, ಬಾ ಹೋಗೋಣ. ನಿನಗೆ